# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 570 006

## ಕೌಶಲ್ಯಾಭಿವೃದ್ಧಿ ತರಬೇತಿ ಶಿಕ್ಷಣ

**ಸಂಖ್ಯೆ :** ಕರಾಮುವಿ/ಕೌಶಲ್ಯಾಭಿವೃದ್ಧಿ/2019-20 ದಿನಾಂಕ : 25-05-2019

## ಸುತ್ತೋಲೆ

**ಪ್ರೀತಿಯ ಕಲಿಕಾರ್ಥಿಗಳೆ,**

**ವಿಷಯ : ಕಲಿಕಾರ್ಥಿಗಳಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡುವ ಬಗ್ಗೆ**

ಭಾರತ ಸರ್ಕಾರ, ವಿಶ್ವವಿದ್ಯಾನಿಲಯ ಅನುದಾನ ಆಯೋಗ ಮತ್ತು ಕರ್ನಾಟಕ ರಾಜ್ಯ ಕೌಶಲ್ಯಾಭಿವೃದ್ಧಿ ಮಂಡಳಿ ಇವುಗಳ ನಿರ್ದೇಶನದಂತೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದಾನಿಲಯವು ಕೌಶಲ್ಯಾಭಿವೃದ್ಧಿ ತರಬೇತಿಯನ್ನು ಆರಂಭಿಸಿದೆ. ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮವು ಭಾರತ ಸರ್ಕಾರದ Skill India ದ ಒಂದು ಭಾಗವಾಗಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದಾನಿಲಯದಲ್ಲಿ ಪ್ರವೇಶಾತಿ ಪಡೆದ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳಾದ **ಆಡಳಿತ ಕನ್ನಡ, English for Communication and Soft Skills, Web Designing, Computer Fundamentals, Desk Top Publishing (DTP), Multimedia** ಮತ್ತು **Basics of Networking** ಗಳನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ಈ ತರಬೇತಿಯನ್ನು ಪಡೆದ ಕಲಿಕಾರ್ಥಿಗಳು ತಮ್ಮ ಮುಂದಿನ ಉದ್ಯೋಗಾವಕಾಶಗಳನ್ನು ಹೆಚ್ಚಿಸಿಕೊಳ್ಳಲು ಅನುಕೂಲವಾಗುತ್ತದೆ.

ಸ್ನಾತಕ ವಿದ್ಯಾರ್ಥಿಗಳಿಗೆ ಮೂರು ಹಂತಗಳ ಕೌಶಲ್ಯಾಭಿವೃದ್ಧಿ ಶಿಕ್ಷಣಕ್ರಮವಿದ್ದು ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಎರಡು ಹಂತಗಳ ಕೌಶಲ್ಯಾಭಿವೃದ್ಧಿ ಶಿಕ್ಷಣಕ್ರಮವಿರುತ್ತದೆ. ಒಂದೊಂದು ಹಂತಗಳಿಗೆ ಒಂದೊಂದು ವರ್ಷದಲ್ಲಿ ತರಬೇತಿ ನೀಡಲಾಗುತ್ತದೆ. ಮೊದಲನೇ ಹಂತದ ಕೌಶಲ್ಯಾಭಿವೃದ್ಧಿ ಶಿಕ್ಷಣಕ್ರಮವನ್ನು ವಿಶ್ವವಿದ್ಯಾನಿಲಯದ ಅಂತರ್ಜಾಲದಲ್ಲಿ ಪ್ರಕಟಿಸಲಾಗಿರುತ್ತದೆ. ಎಲ್ಲಾ ವಿದ್ಯಾರ್ಥಿಗಳು ಕೌಶಲ್ಯಾಭಿವೃದ್ಧಿ ತರಬೇತಿಗೆ ಕಡ್ಡಾಯವಾಗಿ ಹಾಜರಾಗಲು ಸೂಚಿಸಿದೆ.

ಈ ಸಂಬಂಧ, ವಿಶ್ವವಿದ್ಯಾನಿಲಯವು ಸ್ನಾತಕ ಹಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ಈ ಕೆಳಗಿನ ವೇಳಾಪಟ್ಟಿಯಂತೆ ನೀಡಲಾಗುತ್ತಿದೆ :

| ಕ್ರ.ಸಂ. | ಕೇಂದ್ರದ ವಿವರ | BA/BCom/ BLibISc | MA/MCom/M.Sc/ MBA/B.Ed/MLibISc | ವೇಳೆ |
|---|---|---|---|---|
| 1. | **ಕರಾಮುವಿ** ಆವರಣ, ಮುಕ್ತಗಂಗೋತ್ರಿ **ಮೈಸೂರು**<br>Mob: 8197242133 | 02-06-2019 | 23-06-2019 | ಬೆ. 10.00 - ಸಂ. 04.00 |
| 2. | **ಬೆಂಗಳೂರು** – Adithya Institute of Management Studies and Research #12, Kogilu Main Road, Maruthi Nagar, Behind Annapurneshwari Temple, Yelahanka<br>Mob: 94486-68880; 98445-06629 | 23-06-2019 | 30-06-2019 | ಬೆ. 10.00 - ಸಂ. 04.00 |
| 3. | **ದಾವಣಗೆರೆ –**<br>KSOU Regional Centre,<br>J.H Patel Layout, Behind Shamanur,<br>Naganur Road, Mob: 90085-40090 | 23-06-2019 | 30-06-2019 | ಬೆ. 10.00 - ಸಂ. 04.00 |
| 4. | **ಧಾರವಾಡ** - ಕರ್ನಾಟಕ ಯೂನಿವರ್ಸಿಟಿ ಪಬ್ಲಿಕ್ ಸ್ಕೂಲ್, KCD ರಸ್ತೆ, LIC ಎದುರು.<br>Mob: 89054-37178 | 23-06-2019 | 30-06-2019 | ಬೆ. 10.00 - ಸಂ. 04.00 |
| 5. | **ಕಲಬುರಗಿ –**<br>Dr. B.R. Ambedkar Arts & Commerce College, Darga Road, PIN–585 101<br>Mob: 99167-83555 | 23-06-2019 | 30-06-2019 | ಬೆ. 10.00 - ಸಂ. 04.00 |
| 6. | **ಉಡುಪಿ** - M.G.M. College, Manipal Highway, Kunjibettu. Udupi-576102<br>Mob: 99725-26647 | 23-06-2019 | 30-06-2019 | ಬೆ. 10.00 - ಸಂ. 04.00 |

ಈ ಮೇಲ್ಕಂಡ ಕೇಂದ್ರಗಳಲ್ಲಷ್ಟೇ ಕೌಶಲ್ಯಾಭಿವೃದ್ಧಿ ತರಬೇತಿಯು ನಡೆಯಲಿದ್ದು, ಉಳಿದ ಪ್ರಾದೇಶಿಕ ಕೇಂದ್ರಗಳ ವ್ಯಾಪ್ತಿಗೆ ಒಳಪಡುವ ಕಲಿಕಾರ್ಥಿಗಳು ತಮಗೆ ಸಮೀಪವಿರುವ ಈ ಮೇಲೆ ನಮೂದಿಸಿರುವ ಕೇಂದ್ರಗಳಲ್ಲಿ ತರಬೇತಿಗೆ ಹಾಜರಾಗಲು ಸೂಚಿಸಲಾಗಿದೆ. **ವಿದ್ಯಾರ್ಥಿಗಳು ಕಡ್ಡಾಯವಾಗಿ ಗುರುತಿನ ಚೀಟಿಯನ್ನು ತರತಕ್ಕದ್ದು.**

ಕೌಶಲ್ಯಾಭಿವೃದ್ಧಿ ತರಬೇತಿಗೆ ಹಾಜರಾದ ವಿದ್ಯಾರ್ಥಿಗಳಿಗೆ **ಪ್ರಮಾಣಪತ್ರವನ್ನು** ವಿತರಿಸಲಾಗುತ್ತದೆ. ವಿದ್ಯಾರ್ಥಿಗಳ ಆಗಮನಕ್ಕಾಗಿ ನಿರೀಕ್ಷಿಸುತ್ತಿದ್ದೇವೆ. ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾನಿಲಯದ ಅಂತರ್ಜಾಲವನ್ನು ಬೇಟಿ ನೀಡಲು ಸೂಚಿಸಿದೆ : www.ksoumysore.karnataka.gov.in.

ಶುಭಾಶಯಗಳೊಂದಿಗೆ

- Sd -
ಡಾ. ಜೆ.ಎಸ್. ಚಂದ್ರಶೇಖರ್
ಸಂಯೋಜನಾಧಿಕಾರಿ, ಕೌಶಲ್ಯಾಭಿವೃದ್ಧಿ ಶಿಕ್ಷಣ
ಕರಾಮುವಿ, ಮೈಸೂರು

- Sd -
ಪ್ರೊ. ಜಗದೀಶ
ಡೀನ್ ಶೈಕ್ಷಣಿಕ
ಕರಾಮುವಿ, ಮೈಸೂರು